OS No. 62/2018

PW-2

**(ಇಂದು ದಿಃ 25-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಮುಂದುವರೆದ ಪಾಟೀ ಸವಾಲುಃ- ಶ್ರೀ.VJM ವಕೀಲರಿಂದಃ-</u>**

ನಾನು ಈ ದಾವೆ ಸಲ್ಲಿಸುವಾಗ ಅಸಲು ದಾವಾ ನಂಬರ 32/2017 ಡಿಕ್ರಿ ಆಗಿದ್ದು ನನಗೆ ಗೊತ್ತಿತ್ತು. ನಿಪಿ-11 ಮತ್ತು 12 ರ ಬಗ್ಗೆ ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ಅಗ್ರಿಮೆಂಟ ಮಾಡಡಿಕೊಳ್ಳುವಾಗ ಮಹಾದೇವಮ್ಮಳ ವಾರಸುದಾರರನ್ನು ಕರೆಯಿಸಿ ವಿಚಾರಣೆ ಮಾಡಿದ್ದೇವು. ಧರ್ಮರಾವ, ಕಲ್ಯಾಣರಾವ ಮತ್ತು ನಾಗೇಂದ್ರಪ್ಪ 3 ಜನ ಸಹೋದರರು ಎಂದರೆ ಸರಿ. ಅಗ್ರಿಮೆಂಟದಲ್ಲಿ ಧರ್ಮರಾವ ಬಗ್ಗೆ ಉಲ್ಲೇಖ ಇಲ್ಲ, ಸಾಕ್ಷಿ ಮುಂದುವರೆದು ಧರ್ಮರಾವ ರವರ ಪತ್ನಿ ಮತ್ತು ಮಕ್ಕಳು ಮೌಖಿಕವಾಗಿ ಒಪ್ಪಿ ಗೆ ಕೊಟ್ಟಿದ್ದರು ಎಂದು ಹೇಳುತ್ತಾರೆ. ಅವರು ನಮ್ಮ ಕಂಪನಿ ಕಚೇರಿಗೆ ಬಂದು ಒಪ್ಪಿ ಗೆ ಕೊಟಿದ್ದಾರೆ. ಅಗ್ರಿಮೆಂಟಗೆ ನಮ್ಮ ವಕೀಲರ ಸಮಕ್ಷಮ ಒಪ್ಪಿ ಗೆ ನೀಡಿದ್ದಾರೆ. ಧರ್ಮರಾವ ಹೆಂಡತಿ ಮಕ್ಕಳು ಯಾವತ್ತು ಯಾವುದೇ ರೀತಿ ಒಪ್ಪಿ ಗೆ ಕೊಟಿಲ್ಲ ಎಂದರೆ ಸರಿಯಲ್ಲ, ಧರ್ಮರಾವ ಹೆಂಡತಿ ಮಕ್ಕಳ ಸಹಿಗಳನ್ನು ಏಕೆ ಪಡೆದಿಲ್ಲ ಎಂದರೆ ಅಗ್ರಿಮೆಂಟ ನೋಂದಣಿ ಮಾಡಿಕೊಡುವಾಗ ಬರುತ್ತೇವೆ ಎಂದು ಹೇಳಿದ್ದರು ಆದರೆ ಕೊನೆ ಕ್ಷಣದಲ್ಲಿ ಆರೋಗ್ಯ ಸರಿಯಿಲ್ಲ ಎಂದು ಬರಲಿಲ್ಲ ಕಾರಣ ಅವರ ಸಹಿ ಪಡೆದುಕೊಂಡಿಲ್ಲ, ಅಗ್ರಿಮೆಂಟಗೆ ಸಹಿ ಮಾಡಲು ಒಪ್ಪಿ ಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಕಂಪನಿ ಪ್ರತಿನಿಧಿಸುವ ವಕೀಲರಾಗಿರುವ ಕಾರಣ ಕಂಪನಿಗೆ ಅನುಕೂಲ ಆಗುವ ರೀತಿಯಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

ಮರು ವಿಚಾರಣೆ ಇಲ್ಲ,

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**